ಅವನ ನಾಲ್ಕು ಮಕ್ಕಳಲ್ಲಿ ಒಬ್ಬ ಪ್ರಾಥಮಿಕ ಶಾಲೆಗೂ, ಇಬ್ಬರು ಹೈಸ್ಕೂಲು, ಮತ್ತೊಬ್ಬಳು ಕಾಲೇಜಿಗೂ ಹೋಗುತ್ತಿದ್ದರು. ಪ್ರತಿ ತಿಂಗಳೂ ಶುಲ್ಕ ಕಟ್ಟಬೇಕಿತ್ತು.

ಇವತ್ತು ಇಗರ್ಜಿಯ ಗುರುಗಳು ಬಪ್ತೀಸನಿಗೆ ಹೇಳಿ ಕರೆಸಿದ್ದು ದುಡ್ಡಿನ ವಿಚಾರಕ್ಕಾಗಿಯೇ. ಅವನ ಮಕ್ಕಳು ಫೀ ಕಟ್ಟದಿರುವ ಬಗ್ಗೆ...

"ಬತ್ತು... ಹೊಸದಾಗಿ ಕಟ್ಟಿಸುತ್ತಿರುವ ಇಗರ್ಜಿ ಮನೆಗೆ ಎಲ್ಲರೂ ಹೂವಲ್ಲದಿದ್ದರೂ ದಳಗಳನ್ನಾದರೂ ತಂದು ಕೊಡುತ್ತಿದ್ದಾರೆ ಮಾರಾಯ!... ಪ್ರತಿ ಭಾನುವಾರದ ಪೂಜೆಯಲ್ಲೂ ಎಲ್ಲಾ ಕುಟುಂಬದವರು ಕೊಡಲೇಬೇಕೆಂದು ನಾನು ಎಲ್ಲರಿಗೂ ನಾಟುವಂತೆ ಬೊಬ್ಬೆ ಹೊಡೆದು ಹೇಳುತ್ತಲೇ ಬಂದಿದ್ದೇನೆ... ಮನೆ ಕೆಲಸ ಬಿರುಸಾಗಿ ಸಾಗುತ್ತಾ ಇದೆ. ಆದರೂ ಈವರೆಗೆ ನಿನ್ನ ಕಡೆಯಿಂದ ಒಂದು ದಮಡಿಯೂ ಬಂದಂತೆ ಕಾಣಿಸುತ್ತಿಲ್ಲ. ಮನೆ ಕಟ್ಟಿಸುತ್ತಿರುವುದು ನನಗೆ ಅಲ್ಲಪ್ಪ. ನಿಮ್ಮ ಧರ್ಮಕೇಂದ್ರಕ್ಕೆ... ನನ್ನ ಅನಂತರ ನಿಮಗೋಸ್ಕರ ಮುಂದೆ ಬರುವ ಪಾದರಿಗಳಿಗೋಸ್ಕರ! ಅದು ಸಾಯಲಿ ಬಿಡು. ಇದೀಗ, ನೀನು ನಿನ್ನ ಮಕ್ಕಳ ಸ್ಕೂಲು ಫೀಜೂ ಕಟ್ಟದೆ ನಾಲ್ಕು ತಿಂಗಳಾಯ್ತು ಅಂತ ಫಿರ್ಯಾದು ಬಂದಿದೆ. ನೀವು ಫೀಜು ಕೊಡದಿದ್ದರೆ ನಾವು ಶಾಲೆ ನಡೆಸುವುದಾದರೂ ಹೇಗೆ ಅಂತ ನೀನೇ ಹೇಳು ಬಪ್ತೀಸ?... ನಾವು ಶಿಕ್ಷಕರಿಗೆ ಸಂಬಳ ಕೊಡಬೇಕೋ ಬೇಡವೋ? ವಿದ್ಯುತ್ ಬಿಲ್ಲು, ಹಾಳು ಮೂಳು ಕಟ್ಟಬೇಕೋ ಬೇಡವೋ? ನೀವೆಲ್ಲಾ ನಾನಾಲಕ್ಕು ಮಕ್ಕಳ, ನಾನಾಲಕ್ಕು ತಿಂಗಳ ಫೀಜು ಕಟ್ಟದಿದ್ದರೆ ನಾವು ಶಾಲೆ ಮುಚ್ಚಬೇಕೇನೂ? ದುಡ್ಡಿಲ್ಲವೆಂದರೂ ನಿಮಗೇನೂ ಫರಕಾಗುವುದಿಲ್ಲ. ವರ್ಷ ವರ್ಷ ಮಕ್ಕಳಾಗುವುದು ಆಗಲೇ ಬೇಕು! ಒಂದಲ್ಲ, ಎರಡಲ್ಲ, ಮೂರೂ ಅಲ್ಲ... ಬರೋಬರಿ ನಾಲ್ಕು!... ಈ ಕಾಲದಲ್ಲಿ ನಾಲ್ಕು ಮಕ್ಕಳಿದ್ದಾರೆಂದರೆ ಅಷ್ಟೇ ವರಮಾನವಿರಬೇಕು ಬತ್ತಾ... ತೆವಲಿಗೋಸಕ್ಕರ ಮಕ್ಕಳನ್ನು ಮಾಡುತ್ತಾ ಹೋದರೆ ಫೀಜು ಕಟ್ಟಲೂ ದುಡ್ಡಿರುವುದಿಲ್ಲ!

ಬತ್ತಾ... ಫೀಜು ಕಟ್ಟದಿದ್ದರೆ ನಿನ್ನ ಮಕ್ಕಳನ್ನು ಸ್ಕೂಲಿಂದ ಹೊರಗೆ ನಿಲ್ಲಿಸಬೇಕಾಗುತ್ತದೆ ಎಂದು ಶಾಲಾ ಅಡಳಿತ ಮಂಡಳಿ ಸೂಚನೆ ನೀಡಿದೆ. ನಾನೂ ಅದನ್ನೇ ನಿನಗೆ ಹೇಳುತ್ತಿದ್ದೇನೆ..." ಬಪ್ತೀಸನಿಗೆ ಪಾದ್ರಿಗಳು ಖಡಕ್ಕಾಗಿ ಹೇಳಿದರು.

ಬಪ್ತೀಸ ಹೌಹಾರಿದ. ಓದಲು ಹೋಗುತ್ತಿರುವ ಮಕ್ಕಳನ್ನು ಶಾಲೆಯ ಹೊರಗೆ ನಿಲ್ಲಿಸಿದರೆ ಅದಕ್ಕಿಂತ ಹೆಚ್ಚಿನ ಅಪಮಾನ ಬೇರೊಂದಿರಲಾರದು. ಅವನಿಗೆ ಏನು ಮಾಡುವುದೆಂದೇ ತೋಚಲಿಲ್ಲ. ಅವನು ಕಂಗಾಲಾದ.

"ಗುರುಗಳೇ, ನನಗೆ ಫೀಜು ಕಟ್ಟಲಾಗಿಲ್ಲ ನಿಜ. ಆದರೆ, ದಯವಿಟ್ಟು ಅವರನ್ನು ಶಾಲೆಯಿಂದ ಹೊರಕ್ಕೆ ಹಾಕಬೇಡಿ..." ಅವನು ಬೇಡಿಕೊಂಡ. "ನಾನು ಫೀಜು ಖಂಡಿತಾ ಆದಷ್ಟು ಬೇಗ ಕಟ್ಟುತ್ತೇನೆ. ನಾಲ್ಕು ಮಕ್ಕಳು ಬೇಕಿತ್ತಾ ಎಂದು ಕೇಳುತ್ತಿದ್ದೀರಿ. ಏನು ಮಾಡಲಿ? ದೇವರು ಕೊಟ್ಟ ವರಗಳನ್ನು ನಾವು ಖುಷಿಯಿಂದ ಸ್ವೀಕರಿಸಿದ್ದೇವೆ. ನಿಮ್ಮ ಬಾಯಿಂದ ಆ ಮಾತು ಬರಬಾರದಿತ್ತು."

ಗುರುಗಳು ಕುರ್ಚಿಯ ಮೇಲೆ ನೆಟ್ಟಗೆ ಕುಳಿತುಕೊಂಡು ಹೇಳಿದರು: "ನೀನು ತುಂಬಾ ಬುದ್ಧಿವಂತ ಬತ್ತು... ನಾನು ಕಲಿತ ದೈವಶಾಸ್ತ್ರ ನಿನ್ನ ಜ್ಞಾನದ ಮುಂದೆ ಏನೂ ಅಲ್ಲ! ಬಹಳ ಸಂತೋಷ! ದೇವರು ಕೊಟ್ಟ ವರಗಳನ್ನು ಅಷ್ಟೊಂದು ಖುಷಿಯಿಂದ ಸ್ವೀಕರಿಸಿದ್ದೀಯ ಅಂದ ಮೇಲೆ ಅಷ್ಟೇ ಖುಷಿಯಿಂದ ಶಾಲಾ ಫೀಜನ್ನೂ ಕಟ್ಟಿಬಿಡಪ್ಪ... ನಾನು ಏನೂ ಮಾಡಲಾಗುವುದಿಲ್ಲ. ನಾನು ಅಸಹಾಯಕ. ಇದು ಶಾಲಾ ಆಡಳಿತ ಮಂಡಳಿಯ ನಿರ್ಣಯ. ನಾನು ಮೂಗು ತೂರಿಸುವುದಿಲ್ಲ." ಗುರುಗಳು ಕಡ್ಡಿ ತುಂಡುಮಾಡಿದಂತೆ ಹೇಳಿದರು.

"ಇಮಾಜುಗಳ ವ್ಯಾಪಾರ ತೀರಾ ಹದಗೆಟ್ಟಿದೆ ಗುರುಗಳೇ... ವ್ಯಾಪಾರವೇ ಇಲ್ಲ. ನಾನೂ ಮತ್ತು ಸಿಲಾ ಸಾಧ್ಯವಾದಷ್ಟೂ ಶ್ರಮಪಡುತಿದ್ದೀವಿ. ಎಲ್ಲಾ ದೊಡ್ಡ ದೊಡ್ಡ ಚರ್ಚ್ ಹಬ್ಬಗಳ